ಅಸಲು ದಾವೆ ನಂ.20/2019 ಪಿ.ಡಬ್ಲೂಃ 1

ದಿನಾಂಕಃ 28/08/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು 6 ನೇ ಪ್ರತಿವಾದಿ ಪರವಾಗಿ ಶ್ರೀ ಬಿ.ಕೆ.ಎಂ. ವಕೀಲರಿಂದ

1. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ತುರುವೇಕೆರೆ ತಾಲ್ಲೂಕಿನ ಮಾಯಸಂದ್ರದಲ್ಲಿ ಆಟೋ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ತಾಯಿಯ ಹೆಸರು ರಜಿಯಾಬಾನು. ಆಕೆ 3 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. 2 ನೇ ವಾದಿ 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದು ಅವರು ಈಗ ಮೈಸೂರಿನಲ್ಲಿ ವಾಸವಿದ್ದಾರೆ. 1 ನೇ ಪ್ರತಿವಾದಿ ನನ್ನ ದೊಡ್ಡಮ್ಮ. 2 ರಿಂದ 5 ನೇ ಪ್ರತಿವಾದಿಗಳು ನನ್ನ ಸೋದರ ಮಾವಂದಿರು. 1 ಮತ್ತು 5 ನೇ ಪ್ರತಿವಾದಿಗಳು ಮರಣಹೊಂದಿರುತ್ತಾರೆ. ನೂರ್ ಜಹಾನ್ ಬೇಗಂರವರು ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 2 ರಿಂದ 5 ನೇ ಪ್ರತಿವಾದಿಗಳು ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 3 ನೇ ಪ್ರತಿವಾದಿ ಬೆಂಗಳೂರಿನಲ್ಲಿ ಸುಮಾರು 15 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. 2 ನೇ ಪ್ರತಿವಾದಿ ಕೊಣನೂರಿನಲ್ಲಿ ವಾಸವಿದ್ದಾರೆ. 4 ನೇ ಪ್ರತಿವಾದಿ ಸುಮಾರು 30 ವರ್ಷಗಳಿಂದ ನಾಗಮಂಗಲದಲ್ಲಿ ವಾಸವಿದ್ದಾರೆ.

2. 1 ನೇ ಪ್ರತಿವಾದಿಗೆ 5 ಜನ ಮಕ್ಕಳಿರುತ್ತಾರೆ. ಅವರ ಹೆಸರುಗಳನ್ನು ಹೇಳಲಾಗುವುದಿಲ್ಲ ಕಾರಣ ದಾಖಲಾತಿಗಳಲ್ಲಿ ಬೇರೆ ಮತ್ತು ಮನೆಯಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. 5 ನೇ ಪ್ರತಿವಾದಿಗೆ 4 ಜನ ಮಕ್ಕಳು. 5 ನೇ ಪ್ರತಿವಾದಿಯ ಹೆಂಡತಿಯ ಹೆಸರು ಸಲ್ಮಾ. ಅವರಿಗೆ 4 ಜನ ಮಕ್ಕಳು ಅವರೆಂದರೆ ತನ್ವೀರ್, ಸಮೀನಾ, ಫಾರುಕ್ ಮತ್ತು ಅಸ್ಮಾ. 5 ನೇ ಪ್ರತಿವಾದಿಗೆ ಒಬ್ಬರೇ ಹೆಂಡತಿ. 4 ನೇ ಪ್ರತಿವಾದಿಗೆ ಒಬ್ಬರೇ ಹೆಂಡತಿ. 2 ಮತ್ತು 3 ನೇ ಪ್ರತಿವಾದಿಯರಿಗೆ ಇಬ್ಬಿಬ್ಬರು ಹೆಂಡತಿಯರು ಇರುತ್ತಾರೆ. ಈ ದಾವೆಯಲ್ಲಿ ನನಗೆ ಸಾಕ್ಷ್ಯ ನುಡಿಯಲು ನನ್ನ ತಾಯಿಯಾದ 1 ನೇ ವಾದಿ ಏನನ್ನೂ ಬರೆದುಕೊಟ್ಟಿರುವುದಿಲ್ಲ. ನಾನು ಈ ದಾವೆಯಲ್ಲಿ ಪಕ್ಷಗಾರನಾಗಿರುವುದಿಲ್ಲ. ಈ ದಾವೆಯವನ್ನು ವಾದಿಯರು ಭಾಗ ಬಂದಿರುವುದಿಲ್ಲ ಹೂಡಿರುತ್ತಾರೆ. ನನ್ನ ತಾಯಿಯ ತಂದೆಯ ಹೆಸರು ಅಬ್ದುಲ್ ಅಜೀಜ್. ಅವರು ಸುಮಾರು 40 ವರ್ಷಗಳ ಹಿಂದೆಯೇ ಮರಣಹೊಂದಿರುತ್ತಾರೆ. ನನ್ನ ತಾಯಿಯ ತಾಯಿ ಮೆಹರ್ ಉನ್ನೀಸಾ ಆಗಿದ್ದು ಆಕೆ ಸುಮಾರು 15 ವರ್ಷಗಳ ಹಿಂದೆಯೇ ಮರಣಹೊಂದಿರುತ್ತಾರೆ. ನನ್ನ ತಾಯಿಯ ತಾಯಿ ಮತ್ತು ತಂದೆಯವರು ಮರಣಪ್ರಮಾಣಪತ್ರಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಆ ರೀತಿ ಹಾಜರುಪಡಿಸಲು ನಾನು ಪ್ರಯತ್ನಿಸಬೇಕು. ನಮ್ಮ ತಾಯಿಯ ತಂದೆಗೆ ರಜೀಯಾಬೇಗಂ ಎಂಬ ಯಾವುದೇ ಮಗಳು ಇರಲಿಲ್ಲ ಎಂದರೆ ಸರಿಯಲ್ಲ ಆಕೆಯೇ ನನ್ನ ತಾಯಿ. ವಾದಪತ್ರದಲ್ಲಿ ನಮೂದಿಸಿರುವ 1 ನೇ ವಾದಿ ರಜೀಯಾಬಾನು ಎಂದರೆ ನನ್ನ ತಾಯಿಯೇ ಆಗಿದ್ದು ಆಕೆಯನ್ನು ರಜೀಯಾಬಾನು ಮತ್ತು ರಜೀಯಾಬೇಗಂ ಎಂಬ 2 ಹೆಸರಗಳಿಂದ ಕರೆಯುತ್ತಿದ್ದರು. ರಜೀಯಾಬಾನು ಮತ್ತು ರಜೀಯಾಬೇಗಂ ಎರಡೂ ಹೆಸರುಗಳು ಒಬ್ಬರೇ ವ್ಯಕ್ತಿಗೆ ಸೇರಿರುತ್ತದೆ ಎಂದು ನನ್ನ ವಕೀಲರಿಗೆ ತಿಳಿಸಿರುತ್ತೇನೆ. ನಾನು ಮುಸ್ಲಿಂ ಧರ್ಮಕ್ಕೆ ಸೇರಿರುತ್ತೇನೆ. ಮುಸ್ಲಿಂ ಧರ್ಮದಲ್ಲಿ ಎಷ್ಟು ಪಂಗಡಗಳಿವೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ತಾಯಿಯ ತಂದೆ ಯಾವ ಪಂಗಡಕ್ಕೆ ಸೇರಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

(ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
(ನಾಗೇಶ ಮೂರ್ತಿ ಬಿ.ಕೆ.)
ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅರಕಲಗೂಡು.